ನ್ಯಾಯಬೆಲೆ ಅಂಗಡಿಯವನು ಅವರನ್ನು ತಾಲ್ಲೂಕು ಕಚೇರಿಗೆ ಕಳ್ಸಿಕೊಟ್ಟಿದ್ದ. ಇಬ್ಬರೂ ಹರಿಹರದ ಕಚೇರಿಯ ಬಾಗಿಲು ಬಡಿದಿದ್ದರು. ಅವರು ವೋಟರ್ ಕಾರ್ಡ್, ಆಧಾರ್ ಕಾರ್ಡ್ ತಗೊಬನ್ನಿ ಅಂದಾಗಲೇ ಪರಸಪ್ಪನಿಗೆ ತನಗೊಂದು ಆಧಾರ್ ಕಾರ್ಡೂ ಇಲ್ಲ ಅನ್ನೋದು ನೆನಪಾದದ್ದು.

ಕೂಲಿ ಮಾಡಿಕೊಂಡು ತನ್ನ ಪಾಡಿಗಿದ್ದ ಪರಸಪ್ಪ ತನಗೊಂದು ಆಧಾರ್ ಕಾರ್ಡ್ ಬೇಕಾಗುತ್ತೆ ಅಂತ ಎಂದೂ ಯೋಚಿಸಿರಲಿಲ್ಲ. ಆಧಾರ್ ಕಾರ್ಡ್ ತನ್ನ ಬಾಹುಗಳನ್ನು ಚಾಚುವ ಮೊದಲೇ ಅಪ್ಪನ ರೇಷನ್ ಕಾರ್ಡಿನಲ್ಲಿ ಪರಸಪ್ಪ ಜಾಗ ಪಡೆದುಕೊಂಡು ಬೆಚ್ಚಗಿದ್ದ.

ಪರಸಪ್ಪ ಇನ್ನೂ ಆಧಾರ್ ಕಾರ್ಡು ಮಾಡಿಸಿಲ್ಲ ಅನ್ನೋದು ಕೇಳಿ ಊರಿನಲ್ಲಿ ಕೆಲವರು ನಕ್ಕಿದ್ದರು. ಅವರೊಂದಿಗೆ ಪರಸಪ್ಪನೂ ಮುಗ್ಧವಾಗಿ ನಕ್ಕಿದ್ದ. 'ವೋಟರ್ ಕಾರ್ಡ್ ತಗೊಂಡು ಹೋಗಿ ಪೋಟೊ ತಗ್ಸಿಕೊಂಡು ಬಾ ಮಾರಾಯ ತಿಂಗಳೊಪ್ಪತ್ತಿಗೆ ಮನೆಗೆ ಬರುತ್ತೆ ಕಾರ್ಡು...' ಅಂತ ಬಹುತೇಕರು ಸಲಹೆ ಮೇಲೆ ಸಲಹೆ ನೀಡಿದ್ದರು.

ತನ್ನ ಹೊಸ ಬದುಕೊಂದು ಈ ಆಧಾರ್ ಕಾರ್ಡಿನಿಂದಲೇ ಶುರುವಾದಂತಾಗುತ್ತೆ ಅಂತ ಅವನು ಹುರುಪುಗೊಂಡಿದ್ದ. ಒಂದಿನ ನೀಟಾಗಿ ಶೇವ್ ಮಾಡಿಸಿಕೊಂಡು, ಕ್ರಾಪ್ ತೆಗೆದುಕೊಂಡು, ಹೊಸ ಬಟ್ಟೆ ತೊಟ್ಟು ಆಧಾರ್ ಮಾಡಿಸಲು ಹೋಗಿದ್ದ. ಸಾಲು ದೊಡ್ಡದಿತ್ತು. ದಿನವಿಡೀ ಕಾದು, ಯಾರದೋ ಬಳಿ ಅರ್ಜಿ ಬರೆಸಿ, ಸಂಜೆ ಕಂಪ್ಯೂಟರ್ ಮುಂದೆ ನಿಂತು ಫೋಟೊ ತೆಗೆಸಿಕೊಳ್ಳುವ ಹೊತ್ತಿಗೆ ಅವನ ಮುಖ ಬಿಸಿಲಿಗೆ, ಬೆವರಿಗೆ ಇನ್ನಷ್ಟು ಕಪ್ಪಾಗಿತ್ತು.

* * *

ಆಧಾರ್ ಕಾರ್ಡಿಗೆ ಫೋಟೊ ತೆಗೆಸಿ ಬಂದಮೇಲೆ ಒಂಥಾರ ಲವಲವಿಕೆಯಲ್ಲಿದ್ದ. ಒಂದು ಲಹರಿಯಲ್ಲಿ ಟ್ರ್ಯಾಕ್ಟ್ರ ಓಡಿಸುತ್ತಿದ್ದ. ದಿನವಿಡೀ ಟ್ರ್ಯಾಕ್ಟ್ರ ಹೊಡೆದ ದಣಿವನ್ನು, ರಾತ್ರಿಯ ಹೆಂಡತಿ ಪಕ್ಕ ಮಲಗಿ ಕಳೆದುಕೊಳ್ಳುತ್ತಿದ್ದ.

ತಿಂಗಳು ಕಳೆಯಿತು. ಕಾರ್ಡ್ ಬರಲಿಲ್ಲ. ಸಣ್ಣ ದುಗುಡ ಎದೆ ತುಂಬಿತು. ಪೋಸ್ಟ್ ಮ್ಯಾನ್ ದೇವೇಂದ್ರಪ್ಪನಿಗೆ ಫೋಟೊ ತೆಗೆಸಿಕೊಂಡು ಬಂದ ದಿನವೇ ಹೇಳಿಬಿಟ್ಟಿದ್ದ. ಕಾರ್ಡ್ ಬರುತ್ತೆ ತಂದು ಕೊಡಪ್ಪ ಮರೆಯದೆ ಅಂತ. ಆಗಾಗ ವಿಚಾರಿಸುತ್ತಲೂ ಇದ್ದ. ತಿಂಗಳು ಕಳೆದ ಮೇಲೆ ಮತ್ತೊಮ್ಮೆ ದೇವೇಂದ್ರಪ್ಪನನ್ನು ಎಚ್ಚರಿಸಿದ್ದ.

ಎರಡು ತಿಂಗಳಾಯ್ತು. ಕಾರ್ಡ್ ಬರಲಿಲ್ಲ. ಬರುವುದಿಲ್ಲವೋ ಎದೆಯೊಳಗೆ ಏನೋ ತುಂಬಿಕೊಂಡಂತೆ ಭಾರವಾಗತೊಡಗಿತ್ತು. ಈ ಕುರಿತು ಕೆಲವರನ್ನೂ ಕೇಳಿಯೂ ಬಿಟ್ಟ. ಎರಡು ತಿಂಗಳಾದ ಮೇಲೂ ಬರಬಹುದುಬಿಡು ಪರಸಪ್ಪ ಯಾಕೆ ಇಷ್ಟು ಯೋಚನೆ ಮಾಡ್ತಿ ಅಂತ ಗದರಿದ್ದರು. ಆದರೆ ಅವನೊಳಗಿನ ಅವನು ಚಡಪಡಿಸದೆ ಸುಮ್ಮನಿರಲಿಲ್ಲ.

ಮೂರು ತಿಂಗಳಾದರೂ ಕಾರ್ಡ್ ಬರಲಿಲ್ಲ. ಅನುಮಾನ ದಟ್ಟವಾಯ್ತು. ಯಾರೋ ಕೊಟ್ಟ ಸಲಹೆ ಮೇರೆಗೆ ಫೋಟೊ ತೆಗೆದಾಗ ಕೊಟ್ಟ ಚೀಟಿ ತೆಗೆದುಕೊಂಡು ಆಧಾರ್ ಕಾರ್ಡು ಮಾಡುವ ಕಚೇರಿ



ಬಳಿ ಬಂದಿದ್ದ. ಜನರ ಸಾಲು ತುಂಬಾ ದೊಡ್ಡದಿತ್ತು. ತಾನು ಕೂಡ ಸೇರಿಕೊಂಡು ಕಾದಿದ್ದ.

ಕಂಪ್ಯೂಟರ್ ನಲ್ಲಿ ಪರಸಪ್ಪನ ರಶೀದಿ ಸಂಖ್ಯೆ ಹಾಕಿ ನೋಡಿ 'ರಿಜೆಕ್ಟ್ ಆಗೇತ್ರಿ ಇದು.. ಥಂಬ್ ಸರಿ ಬಂದಿಲ್ಲ ಅಂತ.. ಬೇಕಾದ್ರೆ ಹೊಸ್ದು ಮಾಡ್ಸಿ' ಅಂತ ಆಧಾರ್ ಮಾಡಿಕೊಡುವ ಹುಡುಗ ಅಂದಿದ್ದ. ಥಂಬ್ ಅಂದರೆ ಏನು ಅಂತ ಗೊತ್ತಾಗದೆ ಪೆಕರನಂತೆ ನಿಂತಿದ್ದ ಪರಸಪ್ಪ. ಈಗೇನು ಮಾಡೋದು ಅನ್ನುವಂತೆ ನೋಡತೊಡಗಿದ್ದ. 'ಮತ್ತೊಂದು ಸರಿ ಅರ್ಜಿ ತಗೊಬರ್ರಿ.. ವೋಟರ್ ಕಾರ್ಡು ತರ್ರಿ.. ಇವತ್ತು ಆಗಲ್ಲ.. ನಾಳೆನೋ ನಾಡ್ದೊ ಬರ್ರಿ' ಎಂದು ಕಳುಹಿಸಿದ್ದ.

ಅವನೊಳಗಿನ ಉತ್ಸಾಹದ ಕಿಡಿಯೊಂದು ಮಂಕಾಗತೊಡಗಿತ್ತು. ಕೆಲವು ತಿಂಗಳ ಹಿಂದಷ್ಟೇ ಏನೂ ಅಲ್ಲದ ಈ ಕಾರ್ಡು ಈಗ ಬದುಕಿಗೆ ಒಡ್ಡಿದ